ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆಃಕಾಶಿಇ/ನ್ಯಾಕ್/03/ಸುತ್ತೋಲೆ/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಭವನ,
ಶೇಷಾದ್ರಿ ರಸ್ತೆ, ಬೆಂಗಳೂರು-560001.
ದಿನಾಂಕಃ 04.08.2020.

# ಸುತ್ತೋಲೆ

ವಿಷಯ: ಇಲಾಖಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ವೀಡಿಯೋ ಕಾನ್ಫರೆನ್ಸ್ (Video Conference) ಮುಖಾಂತರ ನ್ಯಾಕ್ ಪ್ರಕ್ರಿಯೆಗಳ ಸಂಬಂಧ ಕಾರ್ಯಾಗಾರದಲ್ಲಿ ಭಾಗವಹಿಸುವ ಕುರಿತು.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ಐ.ಕ್ಯೂ.ಎ.ಸಿ. ಸಂಚಾಲಕರು, ಸಹ ಸಂಚಾಲಕರು, ಐ.ಟಿ ಸಂಚಾಲಕರು, ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ಎಲ್ಲಾ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರು, ನೋಡಲ್ ಅಧಿಕಾರಿಗಳು ಕಾಲೇಜುಗಳ ನ್ಯಾಕ್ ಮೌಲ್ಯಮಾಪನದ ಎಲ್ಲಾ ಪ್ರಕ್ರಿಯೆಗಳ ಸಂಬಂಧ ಕಾರ್ಯಾಗಾರವನ್ನು ಈ ಕೆಳಕಂಡ ಕೋಷ್ಟಕದ ಪ್ರಕಾರ ರಾಜ್ಯ ಗುಣಮಟ್ಟ ಭರವಸಾ ಕೋಶ (ಎಸ್.ಕ್ಯೂ.ಎ.ಸಿ) ವತಿಯಿಂದ ಆಯೋಜಿಸಿರುವ ವೀಡಿಯೋ ಕಾನ್ಫರೆನ್ಸ್‌ನಲ್ಲಿ (Video Conference) ಭಾಗವಹಿಸುವಂತೆ ಸೂಚಿಸಲಾಗಿದೆ.

ಒಂದು ಕಾಲೇಜು ಒಂದೇ ಲಾಗಿನ್ ಐ.ಡಿಯ ಮುಖಾಂತರ ಲ್ಯಾಪ್‌ಟ್ಯಾಪ್/ಡೆಸ್ಕ್‌ಟಾಪ್‌ನಲ್ಲಿ ಗೂಗಲ್ ಮೀಟ್ (Google meet) ಸೈಟ್‌ನಲ್ಲಿ ಲಾಗಿನ್ ಆಗಲು ಅಗತ್ಯ ವ್ಯವಸ್ಥೆಯನ್ನು ಮಾಡಿಕೊಳ್ಳುವುದು.

ಗೂಗಲ್ ಮೀಟ್ ಸಭೆಯ ಲಿಂಕ್‌ನ್ನು ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯಿಂದ ಪಡೆದುಕೊಳ್ಳುವುದು.

| ಕ್ರ.ಸಂ | ದಿನಾಂಕ | ಸಮಯ | ವಿಭಾಗ |
|---|---|---|---|
| 1 | 05-08-2020 | 10.30 | ಧಾರವಾಡ |
| 2 | (ಬುಧವಾರ) | 2.00 | ಬೆಂಗಳೂರು |
| 3 | 06-08-2020 | 10.30 | ಕಲಬುರಗಿ |
| 4 | (ಗುರುವಾರ) | 2.00 | ಮೈಸೂರು |
| 5 | 07-08-2020<br>(ಶುಕ್ರವಾರ) | 10.30 | ಮಂಗಳೂರು<br>ಶಿವಮೊಗ್ಗ |

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು:

1. ಎಲ್ಲಾ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2. ಮಾನ್ಯ ಆಯುಕ್ತರ/ ನಿರ್ದೇಶಕರ/ ಹೆಚ್ಚುವರಿ ನಿರ್ದೇಶಕರ/ ಜಂಟಿ ನಿರ್ದೇಶಕರು (ಶೈಕ್ಷಣಿಕ) ಆಪ್ತ ಶಾಖೆ, ಕೇಂದ್ರ ಕಛೇರಿ, ಕಾ.ಶಿ.ಇ., ಬೆಂಗಳೂರು.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಈ ಸುತ್ತೋಲೆಯನ್ನು ಇಲಾಖೆಯ ವೆಬ್-ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಪ್ರತಿ.